ಸಂಗೊಳ್ಳಿ ಹಾಗೂ ದೊಡವಾಡ ಗ್ರಾಮಗಳಲ್ಲಿ 33 ಕೆ.ವಿ. ಸ್ಟೇಷನ್ ಪ್ರಾರಂಭಿಸುವ ಬಗ್ಗೆ

2602(3430) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿ ಹಾಗೂ ದೊಡವಾಡ ಗ್ರಾಮಗಳಲ್ಲಿ 33 ಕೆ.ವಿ. ಸ್ಟೇಷನ್ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ;

ಆ) ಈ ಹೊಸ ಕೆ.ವಿ. ಸ್ಟೇಷನ್‌ಗಳ ಕಾಮಗಾರಿ ಯಾವ ಹಂತದಲ್ಲಿರುತ್ತದೆ?

ಶ್ರೀ ಬಸವರಾಜ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿ ಗ್ರಾಮದಲ್ಲಿ 33 ಕೆ.ವಿ. ವಿದ್ಯುತ್ ಉಪ ಕೇಂದ್ರದ ಸ್ಥಾಪನೆಯ ಪ್ರಸ್ತಾವನೆಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ತಾಂತ್ರಿಕ ಸಮಿತಿಯು ಅಕ್ಟೋಬರ್–2000ದಲ್ಲಿ ಅನುಮೋದನೆ ನೀಡಿರುತ್ತದೆ.

ದೊಡ್ಡವಾಡದಲ್ಲಿ 33 ಕೆ.ವಿ ವಿದ್ಯುತ್ ಉಪಕೇಂದ್ರದ ಸ್ಥಾಪನೆ ಬಗ್ಗೆ ಪ್ರಸ್ತಾವನೆ ಇರುವುದಿಲ್ಲ.

ಆ) ಸಂಗೊಳ್ಳಿ ಗ್ರಾಮದಲ್ಲಿ 2x5 ಎಂ.ವಿ.ಎ. 33/11 ಕೆ.ವಿ. ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವ ಕಾರ್ಯವನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದಿಂದ ನೇಮಕಗೊಂಡಿದ್ದ ಕನ್‌ಸಲ್ಟೆಂಟ್ ಆದ ಪಿ.ಆರ್.ಡಿ.ಸಿ.ಎಲ್. ವರದಿ ಪ್ರಕಾರ 2005–06 ರಲ್ಲಿ ಕೈಗೆತ್ತಿಕೊಳ್ಳಲಾಗುವುದು.

ದೊಡ್ಡವಾಡದಲ್ಲಿ 33 ಕೆ.ವಿ. ವಿದ್ಯುತ್ ಉಪಕೇಂದ್ರದ ಸ್ಥಾಪನೆ ಬಗ್ಗೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಬೆಂಗಳೂರು ನಗರದ ನಗರಸಭೆಗಳಲ್ಲಿನ ಅವ್ಯವಹಾರದ ತನಿಖೆ

2603(2998) ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರದ ಸುತ್ತಮುತ್ತಲಿನ ಯಾವ ಯಾವ ನಗರಸಭೆಗಳಲ್ಲಿ ನಡೆದ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಅಮಾನತ್ತುಗೊಂಡಿದ್ದ ಅಧಿಕಾರಿಗಳು ಪುನರ್ ನೇಮಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದರೆ, ಇಂತಹ ಪ್ರಕರಣಗಳಲ್ಲಿ ಸರ್ಕಾರದವರು ಯಾವ ನೀತಿ ನಿರೂಪಣೆ ಕ್ರಮವನ್ನು ಕೈಗೊಂಡಿದೆ;

ಆ) ಈ ನಗರಸಭೆಗಳಲ್ಲಿನ ಅವ್ಯವಹಾರದಲ್ಲಿ ಭಾಗಿಯಾದ ಅಧಿಕಾರಿಗಳ ಸಿಬ್ಬಂದಿಗಳ ಪ್ರತ್ಯೇಕ ವಿವರ ನೀಡುವುದು;

ಇ) ಇವರ ವಿರುದ್ಧದ ತನಿಖೆಯು ಯಾವ ಹಂತದಲ್ಲಿದೆ;

ಈ) ಯಾವ ಯಾವ ಅಧಿಕಾರಿಗಳ ಮೇಲೆ ಲೋಕಾಯುಕ್ತರ ತನಿಖೆ ಮುಗಿದು ವರದಿ ಸಲ್ಲಿಸಿದ್ದಾರೆ; ಸರ್ಕಾರವು ಈ ವರದಿಯ ಮೇಲೆ ಯಾವ ಕ್ರಮವನ್ನು ಕೈಗೊಂಡಿದೆ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಹೌದು, ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಡಿಪಿಎಆರ್ 13 ಎಸ್‌ಡಿಇ 85 ದಿನಾಂಕ: 3–7–1985 ರಲ್ಲಿನ ಸೂಚನೆಗಳಂತೆ ಅಮಾನತ್ತಿನಲ್ಲಿಟ್ಟ 6 ತಿಂಗಳ ನಂತರವೂ ಸರ್ಕಾರಿ ನೌಕರನ ವಿರುದ್ಧ ತನಿಖೆ ಮುಕ್ತಾಯಗೊಳ್ಳದಿದ್ದಲ್ಲಿ ಅವನ ಅಮಾನತ್ತನ್ನು ರದ್ದು ಪಡಿಸಿ ಸೇವೆಗೆ ಹಿಂತೆಗೆದುಕೊಳ್ಳಲು ಅವಕಾಶವಿರುತ್ತದೆ. ಈ ಅಧಿಕಾರಿಗಳು ಸುಮಾರು 11 ತಿಂಗಳುಗಳಿಗೂ ಹೆಚ್ಚು